ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:3.05.16

ಈ ವಾರದ ಮುನ್ಸೂಚನೆ (4.5.16 to 8.5.16 ವರೆಗೆ)

ನಿಯತಾಂಕಗಳು	4.05.16	5.05.16	6.05.16	7.05.16	8.05.16
ಮಳೆ (ಮಿ ಮಿ)	0	0	0	0	3
ಗರಿಷ್ಠ ಉಷ್ಣಾಂಶ(ಡಿ.ಸೆ.)	37	38	38	36	36
ಕನಿಷ್ಠ ಉಷ್ಣಾಂಶ (ಡಿ.ಸೆ.)	23	25	25	25	22
ಮೋಡ (ಪ್ರಮಾಣ)	2	5	4	4	2
ಅರ್ದ್ರತೆ ೭.೨೦ ಬೆ (ಶೇ)	95	49	54	53	60
ಅರ್ದ್ರತೆ ೨.೨೦ ಮ (ಶೇ)	22	21	24	26	42
ಗಾಳಿಯ ವೇಗ (ಕಿ.ಮಿ/ಗಂಟೆಗೆ)	11	8	8	8	2
ಗಾಳಿಯ ದಿಕ್ಕು (ಡಿಗ್ರಿ)	218	231	195	279	200

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಪಟ್ರೇನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣ ಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 36–38^{o}C ಮತ್ತು ಕನಿಷ್ಠ 22-25^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 49-95 % ಇದ್ದು, ಮಧ್ಯಾಹ್ನ 21-42 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 2-11 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಬರುವ ದಿನಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗುವುದು, ತರಕಾರಿ ಹಾಗೂ ಇತರೆ ಬೆಳೆಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರು ಒದಗಿಸಬೇಕು.
- ✓ **ಪೂರ್ವ ಮುಂಗಾರಿಗೆ ಈ ಕೆಳಗಿನ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.**

  ರಾಗಿ: ಇಂಡಾಫ್–9, ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1

  ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ
- ✓ ಕೋಳಿ ಸಾಕಣೆ, ಜಾನುವಾರು, ರೇಷ್ಮೆ ಕೃಷಿ ಬಿಸಿಲಿನ ತಾಪದಿಂದ ರಕ್ಷಿಸಲು ಸೂಕ್ತ ವ್ಯವಸ್ಥೆ ಕೊಡಬೇಕು.
- ✓ ಜಾನುವಾರು: ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ದನಕರುಗಳಿಗೆ ಕೊಡಿ.
- ✓ ನೀರು ಬರಿದಾಗಿರುವ ಕೆರೆಗಳಲ್ಲಿ ಕೆರೆಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು
- ✓ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮೊದಲನೆ ಬೆಳೆಯಾಗಿ ಅಲಸಂದೆ, ಎಳ್ಳು, ಉದ್ದು, ಹೆಸರು ಮೇ ತಿಂಗಳಿನಲ್ಲಿ ಬಿತ್ತ ಬಹುದಾದ ಇವುಗಳ ಬೇಸಾಯಕ್ಕೆ ಪರಿಕರಗಳ ಪೂರಕಗಳನ್ನು ಸಿದ್ಧತೆ ಮಾಡಿಕೊಳ್ಳಿ.
- ✓ ಮಾವು: ತೇವಾಂಶದ ರಕ್ಷಣೆಗೆ ಬೆಳೆಗಳ ಉಳಿಕೆ ಮತ್ತು ಕಳೆಗಳನ್ನು ಕತ್ತರಿಸಿ ಹೊದಿಕೆ ಮಾಡುವ್ಯದು.
- ✓ ಮಾವಿನ ಮರದ ಕೆಳಗೆ ಬೆಳೆದಿರುವ ಕಳೆಗಿಡಗಳನ್ನು ಕಡಿದುಹಾಕಿ ಸ್ವಚ್ಚಗೊಳಿಸಬೇಕು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. ೪ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು ಅಥವಾ ಇಮಿಡಕ್ಲೋಪ್ರಿಡ್ (0.5 ml/L) ಸಿಂಪಡಿಸಿ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು